ಈ ಮಕ್ಕಳು, ಭೀಮಾಬಾಯಿ ಮತ್ತು ಯಲ್ಲಮ್ಮ ತಮ್ಮ ಅಮ್ಮಂದಿರಂತೆ ತಾವು 'ಎಳೆಯ ವಯಸ್ಸಿಗೆಲ್ಲ ಮದುವೆಯಾಗೋಲ್ಲ, ಓದುತ್ತೇವೆ, ಕೆಲಸ ಹಿಡಿದು ನಮ್ಮ ಕಾಲ ಮೇಲೆ ನಿಲ್ಲುತ್ತೇವೆ' ಎಂಬ ಛಲದಲ್ಲಿ ಹೊರಟಿದ್ದಾರೆ. ಎರಡು ವರ್ಷದ ಹಿಂದೆ, ಮಹೇಶ್ ತಾವು ಓದಿದ್ದ ಸರ್ಕಾರಿ ಪ್ರೌಢಶಾಲೆಗೆ ಹೋಗಿ 'ಎಂಟನೇ ಕ್ಲಾಸ್‌ನಲ್ಲಿ ಯಾರ್‍ಯಾರು ಚೆನ್ನಾಗಿ ಓದುತ್ತಾರೋ ಅವರನ್ನು ನನ್ನಲ್ಲಿಗೆ ಉಚಿತ ಟ್ಯೂಷನ್‌ಗೆ ಕಳುಹಿಸಿ' ಎಂದು ಪ್ರಾಧ್ಯಾಪಕರಲ್ಲಿ ಕೇಳಿಕೊಂಡರು. ಈ ರೀತಿ ಬೆಳಗಿನ ಟ್ಯೂಷನ್‌ಗೆ ಭೀಮಾಬಾಯಿ ಮತ್ತು ಯಲ್ಲಮ್ಮ, ಮಹೇಶ್ ಅವರಲ್ಲಿಗೆ ಬರತೊಡಗಿದರು. ಮಹೇಶ್ ಮಧ್ಯಮವರ್ಗದ ಕುಟುಂಬಗಳಿಂದ ಪಾಠಕ್ಕೆ ಬರುವ ಮಕ್ಕಳಿಂದ ಫೀಸ್ ತೆಗೆದುಕೊಳ್ಳುತ್ತಾರೆ, ಬಡಮಕ್ಕಳಿಗೆ ಉಚಿತವಾಗಿ ಪಾಠ ಹೇಳಿಕೊಡುತ್ತಾರೆ.

ಅಂದಹಾಗೆ, ಕೊಳಚೆ ನಿವಾರಣೆಯ ಸಮಯದಲ್ಲಿ ಯಲ್ಲಮ್ಮನ ಕುಟುಂಬ ಕೂಡಾ ಜಾಗ ಖಾಲಿ ಮಾಡಿ ಹೊರಬೀಳಬೇಕಾಯಿತು. ಒಂದು ಖಾಲಿ ನಿವೇಶನ ಹೊಂದಿದ್ದ ವಯಸ್ಸಾದ ಮಾಲೀಕರೊಬ್ಬರು, ತಿಂಗಳ ಬಾಡಿಗೆ ನಿಗದಿಪಡಿಸಿ ಶೆಡ್ ಹಾಕಿಕೊಳ್ಳಲು ಸ್ಥಳ ಕೊಟ್ಟಿದ್ದರು. ಆದರೆ ಆ ಮಾಲೀಕರಿಗೂ ಅವರ ಮಗನಿಗೂ ಸದಾ ಜಗಳ. ಸರಿಯಾಗಿ ಹತ್ತನೇ ತರಗತಿಯ ಪರೀಕ್ಷೆಯ ಸಮಯದಲ್ಲಿಯೇ ಆ ಮಾಲೀಕರ ಮಗ, 'ಆಸ್ತಿ ಕೊಡು' ಎಂದು ಅಪ್ಪನೊಡನೆ ಕಿತ್ತಾಡಿ, ಆ ಸ್ಥಳದಲ್ಲಿದ್ದ ಒಂದು ಶೆಡ್ ಅನ್ನು ಕೆಡವಿ ಹಾಕಿದ್ದ. ಆ ಗಲಾಟೆಯಿಂದಾಗಿ, ರಾತ್ರೋರಾತ್ರಿ ಜಾಗ ಖಾಲಿ ಮಾಡಿ ಮತ್ತೊಂದೆಡೆಗೆ ಬರಬೇಕಾಯಿತು. ಮರುದಿನ ಯಲ್ಲಮ್ಮನಿಗೆ ವಿಜ್ಞಾನದ ಪರೀಕ್ಷೆ ಇತ್ತು!

ಈಗ ಯಲ್ಲಮ್ಮನ ಕುಟುಂಬ ಇರುವ ಒಂದು ಕೋಣೆಯ ಮನೆಗೆ ತಗಡಿನದೇ ತಾರಸಿ ಆದರೂ, ಗೋಡೆಗಳಿವೆ. ಈ ಕಾಂಪೌಂಡಿನಲ್ಲಿ 16 ಇಂತಹುದೇ 'ಮನೆ'ಗಳಿವೆ. ಈ ಹದಿನಾರು ಮನೆಗಳಿಗೂ ಸೇರಿಸಿ ಒಂದು ಶೌಚಾಲಯದ ಐಷಾರಾಮವೂ ಇದೆ! 'ಅರ್ಜೆಂಟಾದ್ರೆ ಏನು ಮಾಡ್ತೀರಮ್ಮ?' – ಮತ್ತೆ ದಡ್ಡ ಪ್ರಶ್ನೆ ನನ್ನ ಬಾಯಲ್ಲಿ ಬಂದು ಬಿಟ್ಟಿತು. 'ಹೋಗಿರೋರು ಹೊರಗೆ ಬರೋತನಕ ಕಾಯಬೇಕು ಅಷ್ಟೆ' ಎಂದು ಯಲ್ಲಮ್ಮ ದೊಡ್ಡದಾಗಿ ನಕ್ಕಳು.

ಯಲ್ಲಮ್ಮ ಸರ್ಕಾರಿ ಪಿ.ಯು. ಕಾಲೇಜ್ ಸೇರಿಕೊಂಡಿದ್ದಾಳೆ. ಬಿ.ಕಾಂ ಮಾಡಿ 'ಕ್ಯಾಟ್' ಪರೀಕ್ಷೆ ತೆಗೆದುಕೊಂಡು ಐ.ಐ.ಎಂ.ಗೆ ಪ್ರವೇಶ ಪಡೆಯುವ ಮಹದಾಸೆ ಆಕೆಯದು. ಮಹೇಶ್ 'ನಾನು ಎರಡನೇ ಪಿಯುಸಿಯಿಂದಲೇ ಕ್ಯಾಟ್ ಕೋಚಿಂಗ್ ಆರಂಭಿಸುತ್ತೇನೆ' ಎಂದು ಭರವಸೆ ನೀಡಿದ್ದಾರೆ. ಈ ಮಕ್ಕಳು ಕನ್ನಡ ಮೀಡಿಯಂನಲ್ಲಿ ಓದುತ್ತಿದ್ದವರು. ಈಗ ಒಂದು ವರ್ಷದ ಹಿಂದೆ ಒಂಬತ್ತನೇ ಕ್ಲಾಸ್‌ನಲ್ಲಿ ಇಂಗ್ಲಿಷ್ ಮೀಡಿಯಂಗೆ ಬದಲಾಯಿಸಿಕೊಂಡರು. ಮಹೇಶ್, ಇಂಗ್ಲಿಷ್ ಮಾಸ್ತರ್ ಡೆಸ್ಮೆಂಡ್ ಸ್ನೆಲ್ ಅವರಿಂದ ಈ ಮಕ್ಕಳಿಗೆ ಇಂಗ್ಲಿಷ್ ಕಲಿಸಿದ್ದರು.

ಯಲ್ಲಮ್ಮನ ಅಣ್ಣ ಕಳೆದ ವರ್ಷ ಹತ್ತನೇ ತರಗತಿಯಲ್ಲಿ ಫೇಲ್ ಆಗಿದ್ದ. ಮಗ ಫೇಲ್ ಆಗಿ ಮಗಳು ಈ ವರ್ಷ 86 ಪರ್ಸೆಂಟ್ ತೆಗೆದು, ಎಲ್ಲರೂ 'ನಿನ್ನ ಮಗಳು ಎಷ್ಟು ಚೆನ್ನಾಗಿ ಓದಿದ್ದಾಳೆ' ಎಂದು ಹೇಳತೊಡಗಿದಾಗ ತಂದೆಗೆ ಜ್ಞಾನೋದಯವಾಗಿದೆ. ಈಗ ಅಪ್ಪ, 'ನೀನು ಚೆನ್ನಾಗಿ ಓದು ಎಂದು ಅಭಿಮಾನದಿಂದ ಹೇಳುತ್ತಾರೆ' ಎಂದು ಯಲ್ಲಮ್ಮ ಸಂತಸದಿಂದ ಹೇಳಿದಳು.

ಈ ಮಕ್ಕಳು ಓದಿದ ಹೆಬ್ಬಾಳದ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಪುಟ್ಟತಾಯಮ್ಮ ಅವರನ್ನು ನಾನು ಭೇಟಿಯಾಗಿದ್ದೆ. ಅವರು ಆ ಶಾಲೆಯ ಅಭಿವೃದ್ಧಿಗೆ ಇನ್ನಿಲ್ಲದಂತೆ

## ವಿದ್ಯೆಯ ಬೆರಳ ಹಿಡಿದು ಬಡತನದ ಗೂಡಿನಾಚೆಗೆ ಬಂದ ಹುಡುಗಿ

ಬಡತನದ ಗೂಡಿನಿಂದ ಮೇಲೇರುವುದು ಅಸಾಧ್ಯವಲ್ಲ ಎಂದು ತೋರಿಸಿಕೊಟ್ಟಿದ್ದಾರೆ, ಶೀತಲ್ ಖಾಸ್ನಿಸ್ ಕಾಮತ್. 1971ರಲ್ಲಿ ಪುಣೆಯಲ್ಲಿ ಹುಟ್ಟಿದ ಶೀತಲ್, ಎಂಟು ಅಡಿ ಅಗಲ, ಎಂಟು ಅಡಿ ಉದ್ದ ಇದ್ದ ತಗಡಿನ ತಾರಸಿಯ ಪುಟ್ಟ ಮನೆಯಲ್ಲಿ ಬೆಳೆದವರು. ತಂದೆಗೆ ತಿಂಗಳಿಗೆ 60 ರೂಪಾಯಿ ಸಂಬಳ. ಕಾರ್ಖಾನೆಯಲ್ಲಿ ಕಾರ್ಮಿಕರಾದ ತಾಯಿಯ ಸಂಬಳವೂ ಹೆಚ್ಚೇನಿರಲಿಲ್ಲ.

ಕನ್ವೇಯರ್ ಬೆಲ್ಟ್ ಮೇಲಿನ ಅಮ್ಮನ ಕೆಲಸ ಬಲು ಶ್ರಮದ್ದಾದರೂ ಆಕೆ ಎಂದೂ ಬದುಕಿನ ಬಗ್ಗೆ ದೂರಿದ್ದಿಲ್ಲ. ಸದಾ ಖುಷಿಯಿಂದ ಇರುವ ತಾಯಿಯನ್ನು ನೋಡಿ ಬೆಳೆದ ಶೀತಲ್ 'ನನ್ನ ಬಾಲ್ಯ ಬಡತನದಲ್ಲಿಯೂ ತುಂಬಾ ಸಂತಸದ್ದಾಗಿತ್ತು' ಎನ್ನುತ್ತಾರೆ. ಈ ಬಡತನದಿಂದ ಸಮೃದ್ಧಿಗೆ ಇರುವ ಒಂದೇ ಹಾದಿ 'ವಿದ್ಯೆ' ಎಂದು ಅರಿತಿದ್ದರು. ಬಿ.ಕಾಂ. ಮಾಡಿದರು, ದುಡಿಯುತ್ತಲೇ ಓದಿದರು. ಡಿಪ್ಲೊಮಾ ಇನ್ ಕಂಪ್ಯೂಟರ್ ಸೈನ್ಸ್ ಮಾಡಿ, 'ಸಿಂಬಯಾಸಿಸ್ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್'ಗೆ ಎಂ.ಬಿ.ಎ ಮಾಡಲು ಸೇರಿದರು.

ಮರಾಠಿ ಮೀಡಿಯಂನಲ್ಲಿ ಓದಿದ ಕಾರಣ, ಇಂಗ್ಲಿಷ್ ಅಷ್ಟು ಬಾರದೆ, ಮೊದಲ ವರ್ಷ ಬಲು ಕಷ್ಟದ್ದಾಗಿತ್ತು. ಆದರೆ ಕೊನೆಯ ವರ್ಷ, ಪುಣೆ ವಿಶ್ವವಿದ್ಯಾಲಯಕ್ಕೆ ಏಳನೆಯವರಾಗಿ ಹೊರಬಂದರು. ಸಿಂಬಯಾಸಿಸ್‌ನಲ್ಲಿ ಭೇಟಿಯಾದ ಸುರೇಶ್ ಕಾಮತ್ ಅವರನ್ನು ವರಿಸಿದ ಶೀತಲ್, ಕೆಲವು ವರ್ಷ ಬಾಂಬೆಯಲ್ಲಿ ಕೆಲಸ ಮಾಡಿ, ಪತಿಯೊಡನೆ ಬೆಂಗಳೂರಿಗೆ ಬಂದು ನೆಲೆಸಿದರು. ಯಾವ ಇಂಗ್ಲಿಷ್ ಭಾಷೆಯನ್ನು ಮಾತನಾಡಲು ಬಾರದೆ ಕಷ್ಟಪಟ್ಟಿದ್ದರೋ, ಅದೇ ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವ ಸಾಧಿಸಿದರು. ಟೊಫಲ್, ಜಿ.ಆರ್.ಇ.ಗಳ ಸರ್ಟಿಫೈಡ್ ಟ್ರೈನರ್ ಆದರು, ತಮ್ಮದೇ ಆದ ಟ್ರೈನಿಂಗ್ ಸಂಸ್ಥೆಯನ್ನೂ ತೆಗೆದವರು. ಸೀನಿಯರ್ ಕಾರ್ಪೊರೇಟ್ ಟ್ರೈನರ್ ಆಗಿ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿ ಮುಂದುವರೆದಿರುವ ಶೀತಲ್ ಕಾಮತ್ ಅವರನ್ನು ಸಂದರ್ಶಿಸುತ್ತಾ 'ನಿಮ್ಮ ಆ ದಿನದ ಫೋಟೊ ಇದೆಯೆ?' ಕೇಳಿದೆ. ಅವರು ತೋರಿಸಿದ ಫೋಟೊ ನೋಡಿದೆ; ನಿಜ, ತಗಡಿನ ಪುಟ್ಟ ಮನೆ! ಆದರೆ ಅದರ ಹೊರಗೆ, ಇಷ್ಟಗಲ ನಗುವಿನೊಡನೆ ಅತ್ಯಂತ ಖುಷಿಯಿಂದ ನೃತ್ಯ ಮಾಡುತ್ತಿದ್ದಳು ಪುಟ್ಟ ಶೀತಲ್!



ಪುಣೆಯ ಸಣ್ಣ ಕೋಣೆಯ 'ಮನೆ'ಯ ಹೊರಗೆ, ಸಂತಸದಿಂದ ನೃತ್ಯ ಮಾಡುತ್ತಿರುವ ಪುಟ್ಟ ಹುಡುಗಿ ಶೀತಲ್